## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 594 |
| ಸದಸ್ಯರ ಹೆಸರು | : | ಶ್ರೀ ಆರ್. ಧರ್ಮಸೇನ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16.09.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿರವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣಗೊಂಡಿರುವ ಕುಮಾರಸ್ವಾಮಿ ಬಡಾವಣೆಯಲ್ಲಿನ 69ನೇ ಅಡ್ಡರಸ್ತೆಯನ್ನು (ವಾಸವಿ ಆಸ್ಪತ್ರೆಯ ಹತ್ತಿರ) ಮೊದಲನೇ ಹಾಗೂ ಎರಡನೇ ಹಂತ ಎಂದು ವಿಭಜಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು. |
| ಆ | ಅದರಲ್ಲಿ ಮನೆ ಸಂ.577 ರಿಂದ 600 ರವರೆಗಿನ ಮನೆಗಳು ಒಳಗೊಂಡಿರುವುದು ಸಹ ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಇ | ಬಂದಿದ್ದಲ್ಲಿ, ಅವುಗಳನ್ನು ಒಂದನೇ ಹಂತಕ್ಕೆ ಒಳಪಡುವ ಮನೆಗಳ ವಿವರಗಳು ಮತ್ತು ಎರಡನೇ ಹಂತಕ್ಕೆ ಒಳಪಡುವ ಮನೆಗಳ ವಿವರಗಳನ್ನು ಮನೆಯ ಸಂಖ್ಯೆಗಳೊಂದಿಗೆ ವಿವರವಾಗಿ ಒದಗಿಸುವುದು. | ಸದರಿ ಮನೆ ಸಂಖ್ಯೆ:577 ರಿಂದ 600 ರವರೆಗಿನ ಮನೆಗಳು ಕುಮಾರಸ್ವಾಮಿ ಬಡಾವಣೆ ಒಂದನೇ ಹಂತಕ್ಕೆ ಒಳಗೊಂಡಿರುತ್ತದೆ. ಒಂದನೇ ಹಂತಕ್ಕೆ 1 ರಿಂದ 1800 ಸಂಖ್ಯೆಯ ನಿವೇಶನಗಳು ಮತ್ತು ಎರಡನೇ ಹಂತಕ್ಕೆ 1801 ರಿಂದ 4263 ಸಂಖ್ಯೆಯ ನಿವೇಶನಗಳನ್ನು ರಚಿಸಲಾಗಿರುತ್ತದೆ. |
| ಈ | ಸದರಿ ರಸ್ತೆಯು ಸಂಪೂರ್ಣವಾಗಿ ಹಾಳಾಗಿದ್ದು, ಡಾಂಬರೀಕರಣ ಯಾವಾಗ ಕೈಗೊಳ್ಳಲಾಗುವುದು? | ಕುಮಾರಸ್ವಾಮಿ ಬಡಾವಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಿ.ಬಿ.ಎಂ.ಪಿ ಗೆ ದಿನಾಂಕ:01.10.1998 ರಂದು ಹಸ್ತಾಂತರಿಸಲಾಗಿದ್ದು, ಸದರಿ ರಸ್ತೆಯಲ್ಲಿ ಪ್ರಸ್ತುತ ಬೆಸ್ಕಾಂ ಸಂಸ್ಥೆಯಿಂದ OH to UG Cable Conversions ರ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ, ಸದರಿ ರಸ್ತೆಯಲ್ಲಿ ಕೇಬಲ್ ಅಳವಡಿಸುವ ಕಾಮಗಾರಿಯು ಪೂರ್ಣಗೊಂಡ ನಂತರ ರಸ್ತೆಯ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |

ನಅಇ 209 ಬೆಂಆಸೇ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ